# 1. ಯಾವುದು ಇಷ್ಟ

**ಗುರುಗಳು** :
ಹೇಳೆ ಗಂಗಾ, ಹೇಳೆ ಗಂಗಾ
ಯಾವ ಕಾಲವು ಇಷ್ಟ ?
ನಿನಗೆ ಯಾವ ಕಾಲವು ಇಷ್ಟ ?

**ಗಂಗಾ** :
ದಿನವಿಡೀ ಆಡಲು ನೀರನು ಸುರಿಸುವ
ಪೇಟೆಗೆ ಹೋಗಲು ಕೊಡೆಯನು ಹಿಡಿಸುವ
ಮಳೆಗಾಲವೆ ಇಷ್ಟ
ನನಗೆ ಮಳೆಗಾಲವೆ ಇಷ್ಟ



| | | |
|---|---|---|
| **ಗುರುಗಳು** | : | ಹೇಳೆ ತುಂಗಾ, ಹೇಳೆ ತುಂಗಾ<br>ಯಾವ ಕಾಲವು ಇಷ್ಟ?<br>ನಿನಗೆ ಯಾವ ಕಾಲವು ಇಷ್ಟ? |
| **ತುಂಗಾ** | : | ಬೆಚ್ಚನೆ ಬಟ್ಟೆಯ ತೊಡಿಸಲು ಬರುವ<br>ಬಿಸಿ ಬಿಸಿ ಬೆಳಸಿಯ ತಿನ್ನಲು ಬರುವ<br>ಚಳಿಗಾಲವೆ ಇಷ್ಟ<br>ನನಗೆ ಚಳಿಗಾಲವೆ ಇಷ್ಟ |
| **ಗುರುಗಳು** | : | ಹೇಳೊ ರಂಗಾ ಹೇಳೊ ರಂಗಾ<br>ಯಾವ ಕಾಲವು ಇಷ್ಟ?<br>ನಿನಗೆ ಯಾವ ಕಾಲವು ಇಷ್ಟ? |
| **ರಂಗಾ** | : | ನೇರಲ, ಮಾವಿನ ಹಣ್ಣನು ಕೊಡುವ<br>ಆಟಕೆ ನಮಗೆ ಬಿಡುವನು ತರುವ<br>ಬೇಸಿಗೆ ಕಾಲವೆ ಇಷ್ಟ<br>ನನಗೆ ಬೇಸಿಗೆ ಕಾಲವೆ ಇಷ್ಟ |



**ಮಕ್ಕಳು** : ಹೇಳಿರಿ ಗುರುಗಳೆ, ಹೇಳಿರಿ ಗುರುಗಳೆ
ಯಾವ ಕಾಲವು ಇಷ್ಟ ?
ನಿಮಗೆ ಯಾವ ಕಾಲವು ಇಷ್ಟ ?

**ಗುರುಗಳು** : ಆಟಕೆ ಊಟಕೆ ನೀರನು ಕೊಡುವ
ಬೆಚ್ಚನೆ ಉಡುಗೆ ತೊಡಿಸಲು ಬರುವ
ತಿನ್ನಲು ಸವಿ ಸವಿ ಹಣ್ಣನು ತರುವ
ಮೂರು ಕಾಲಗಳಿಷ್ಟ
ನನಗೆ ಮೂರು ಕಾಲಗಳಿಷ್ಟ





**ಶಬ್ದಗಳ ಅರ್ಥ :**

ಇಷ್ಟ – ಪ್ರೀಯವಾದ ;   ಪೇಟೆ – ಮಾರುಕಟ್ಟೆ ;   ಬೆಳಸಿ – ರಸ ತುಂಬಿದ ಕಾಳು, ಎಳೆಯ ಕಾಳು.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.
  ಸುರಿಸು – ................ ;   ಕೊಡೆ – ................ ;   ಸವಿ – .................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ಕೊಡೆಯು ಯಾವ ಕಾಲವನ್ನು ನೆನಪಿಸುತ್ತದೆ ?

ಉತ್ತರ ....................................................................................

ಆ) ಬೆಳಸಿ ಸಿಗುವ ಕಾಲ ಯಾವುದು ?

ಉತ್ತರ ....................................................................................

ಇ) ಬೇಸಿಗೆ ಕಾಲದಲ್ಲಿ ದೊರೆಯುವ ಹಣ್ಣುಗಳಾವವು ?

ಉತ್ತರ ....................................................................................

ಈ) ಗುರುಗಳಿಗೆ ಇಷ್ಟವಾದ ಕಾಲಗಳು ಯಾವುವು?

ಉತ್ತರ ....................................................................................

**ಪ್ರಶ್ನೆ 2) ಬರುವ – ತರುವ ಈ ಉದಾಹರಣೆಯಂತಿರುವ ಅಂತ್ಯಪ್ರಾಸದ ಜೋಡಿಗಳನ್ನು ಬರೆಯಿರಿ.**

**ಪ್ರಶ್ನೆ 3) ಮಳೆಗಾಲದಲ್ಲಿ ನಿಮಗೆ ಬಂದ ಸವಿ ಅನುಭವಗಳನ್ನು ಬರೆಯಿರಿ.**

....................................................................................

....................................................................................

....................................................................................

....................................................................................

**ಪ್ರಶ್ನೆ 4) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

| ಮಳೆಗಾಲದಲ್ಲಿಧರಿಸುವ ಉಡುಪುಗಳು | ಚಳಿಗಾಲದಲ್ಲಿ ಧರಿಸುವ ಉಡುಪುಗಳು | ಬೇಸಿಗೆ ಕಾಲದಲ್ಲಿ ಧರಿಸುವ ಉಡುಪುಗಳು |
|---|---|---|
| | | |

**ಉಪಕ್ರಮ :** ಬೇಸಿಗೆ ಕಾಲದಲ್ಲಿ ಅರಳುವ ಹೂವುಗಳ ಹೆಸರುಗಳನ್ನು ಬರೆಯಿರಿ.